ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 544/2019

ಸಿ.ಡಬ್ಲ್ಯೂ -1, ಪಿ.ಡಬ್ಲ್ಯೂ -1

ದಿಃ **06.06.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ದೇವಿರಮ್ಮ |
| ತಂದೆ/ಗಂಡನ ಹೆಸರು | ರಾಜೇಗೌಡ |
| ವಯಸ್ಸು | 55 ವರ್ಷ |
| ಕೆಲಸ | ಕೂಲಿ |
| ವಾಸಸ್ಥಳ | ಮೂಡಲುಕೊಪ್ಪಲು ಗ್ರಾಮ |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದಃ**

ಚಾಸಾ-**2** ಗೊತ್ತು. ಆರೋಪಿಗಳು ಗೊತ್ತು. **2016** ರಲ್ಲಿ ಬೆಳಿಗ್ಗೆ **11.00** ಗಂಟೆಯಲ್ಲಿ ನಮ್ಮ ಮನೆಯ ಹತ್ತಿರ ಇದ್ದಾಗ ನಾನು ಸ್ವಾಧೀನದಲ್ಲಿರುವ ನನ್ನ ನಿವೇನಕ್ಕೆ ಆರೋಪಿಗಳು ದನಗಳನ್ನು ಹೊಡೆದುಕೊಂಡು ಬಂದಿರುತ್ತಾರೆ. ದನಗಳನ್ನು ನಾನು ಹೊಡೆಯಲು ಹೋದಾಗ **1** ನೇ ಆರೋಪಿ ನನ್ನ ಮುಂಭಾಗದ ತಲೆಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. **2** ನೇ ಆರೋಪಿ ದೊಣ್ಣೆಯಿಂದ ಹೊಡೆದು ನನಗೆ ಹಿಂಸೆ ನೀಡಿರುತ್ತಾರೆ. **3** ನೇ ಆರೋಪಿ ಹುಲ್ಲಿಗೆ ಬೆಂಕಿಯನ್ನು ಹಚ್ಚಿರುತ್ತಾನೆ. ಸದರಿ ಪರಿಣಾಮ ನಾನು ಜ್ಞಾನ ಇಲ್ಲದೇ ಬಿದ್ದಿರುತ್ತೇನೆ. ಆಗ ರಸ್ತೆಯಲ್ಲಿ ಹೋಗುತ್ತಿದ್ದ ಚಾಸಾ-**2** ರವರು ನನ್ನನ್ನು ಹುಣಸೂರು ಸಾರ್ಜನಿಕ ಆಸ್ಪತ್ರೆ ಗೆ ಕರೆದುಕೊಂಡು ಹೋಗಿರುತ್ತಾರೆ. ನನ್ನ ತಲೆಗೆ ಹೊಲಿಗೆ ಹಾಕಿದ ನಂತರ ಮೈಸೂರು ಕೆ.ಆರ್. ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಕೆ.ಆರ್. ಆಸ್ಪತ್ರೆಯಲ್ಲಿ ನಾನು ಪೊಲೀಸರಿಗೆ ಹೇಳಿಕೆಯ ದೂರನ್ನು ನೀಡಿರುತ್ತಾರೆ. ಆ ಸಮಯದಲ್ಲಿ ಏನು ಹೇಳಬೇಕೆಂದು ನನಗೆ ಅರಿವು ಇರಲಿಲ್ಲ. ಏನು

ಹೇಳಿರುತ್ತೇನೋ ಅಂತ ಸಹ ನನಗೆ ಗೊತ್ತಿಲ್ಲ. ಹೇಳಿಕೆ ದೂರಿಗೆ ನನ್ನ ಹೆಬ್ಬೆಟ್ಟನ್ನು ಹಾಕಿಸಿಕೊಂಡಿರುತ್ತಾರೆ. ಆದರೆ ಸದರಿ ದೂರಿನಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ಹೇಳಿಕೆಯ ದೂರನ್ನು ನಿಪಿ-1 ಎಂದು ಗುರುತಿಸಲಾಯಿತು. ದೊಣ್ಣೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಎರಡು ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ-1 ಮತ್ತು 2 ಎಂದು ಗುರುತಿಸಲಾಯಿತು. ಆರೋಪಿಗಳನ್ನು ನೋಡಿದರೆ ಗುರುತಿಸಿದ್ದು. ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. 3 ನೇ ಆರೋಪಿ ಮರಣ ಹೊಂದಿರುತ್ತಾನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ ವಕೀಲರಿಂದಃ**

ಆರೋಪಿಗಳು ಹೊಡೆದಿರುವ ಬಗ್ಗೆ ನಾನೇ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸುಳ್ಳು.

**ಪಾಟೀ ಸವಾಲು ಆರೋಪಿ ಪರ ಶ್ರೀ ವಿ.ವಿ ವಕೀಲರಿಂದಃ**

ನಮ್ಮ ವಾಸದ ಮನೆಯ ಪಶ್ಚಿಮಕ್ಕೆ ಸ.ನಂ. ಖಾಲಿ ಜಾಗ ಇರುತ್ತದೆಂದರೆ ಸರಿ. ಖಾಲಿ ನಿವೇಶನದ ಪಶ್ಚಿಮಕ್ಕೆ ಶಿವಣ್ಣೇಗೌಡರವರ ಮನೆ ಎಂದರೆ ಸರಿ. ಖಾಲಿ ನಿವೇಶನದ ದಕ್ಷಿಣಕ್ಕೂ ಲಕ್ಷ್ಮೇಗೌಡರವ ಮನೆ ಇದೆ ಎಂದರೆ ಸರಿ. ಖಾಲಿ ನಿವೇಶನದ ಮೂರು ದಿಕ್ಕಿನಲ್ಲೂ ಸಹ ವಾಸದ ಮನೆಗಳಿದ್ದು ಉತ್ತರಕ್ಕೆ ಸಾರ್ಜನಿಕ ರಸ್ತೆ ಎಂದರೆ ಸರಿ. ಸದರಿ

ಸಾರ್ವಜನಿಕ ರಸ್ತೆಯಲ್ಲಿ ಬೆಳಿಗ್ಗೆಯಿಂದ ಸಂಜೆಯ ತನಕ ಸಾರ್ವಜನಿಕರು ಓಡಾಡುತ್ತಾರೆಂದರೆ ಸರಿ. ರಸ್ತೆಯಿಂದ ಉತ್ತರಕ್ಕೆ ಒಂದು ಚಿಲ್ಲರೆ ಅಂಗಡಿ ಬೆಳಿಗ್ಗೆಯಿಂದ ಸಂಜೆಯವರೆಗೆ ಇರುತ್ತದೆಂದರೆ ಸರಿ. ಶಿವಣ್ಣೇಗೌಡರವರ ಮತ್ತು ಲಕ್ಕೇಗೌಡರವರ ಮನೆಯವರು ನಿವೇಶನದ ಹತ್ತಿರನೇವಾಸ ವಿರುತ್ತಾರೆಂದರೆ ಸರಿಯಲ್ಲ. ಘಟನೆ ನಡೆಯಿತು ಎಂದು ಹೇಳಲಾದ ಜಾಗದ ಬಗ್ಗೆ ಇದೇ ನ್ಯಾಯಾಲಯದಲ್ಲಿ ಓ.ಎಸ್ **7/2015** ರಂತೆ ಸಿವಿಲ್ ದಾವೆಯನ್ನು ಹೂಡಿರುತ್ತೇನೆಂದರೆ ಸರಿ. ಸದರಿ ದಾವೆಯಲ್ಲಿ ನಮ್ಮ ವಿರುದ್ಧ ಆರೋಪಿಗಳ ಪರ ತಾತ್ಕಾಲಿಕ ನಿರ್ಭಾಂಜ್ಞೆಯನ್ನು ನ್ಯಾಯಾಲಯ ನೀಡಿರುತ್ತದೆ ಎಂದರೆ ಸರಿ. ಸದರಿ ತಾತ್ಕಾಲಿಕ ನಿರ್ಭಾಂಜ್ಞೆಯ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಘಟನೆ ನಡೆಯಿತು ಎಂದು ಹೇಳುವ ಸಮಯದಲ್ಲಿ ಎಷ್ಟು ಜನ ಇದ್ದರು ಎಂದರೆ ಸಾಕ್ಷಿ ಐದು ಆರೂ ಜನ ಎಂದು ನುಡಿಯುತ್ತಾರೆ. ಸದರಿಯವರೆಂದರೆ, ಪ್ರಿಯಾಂಕ ಬಿನ್ ಪ್ರಕಾಶ, ಪ್ರಕಾಶ, ರೇಖಾ ಮತ್ತು ಶಿವಣ್ಣೇಗೌಡರವರು ಹಾಗೂ ಅವರ ಕುಟುಂಬಸ್ಥರು. ಮುಂದುವರೆದು ಪಕ್ಕದ ಗ್ರಾಮದವರು ಸೊಪ್ಪು ಮಾರಾಲು ಬಂದಿದ್ದರು ಅವರು ಸಹ ಘಟನೆ ನಡೆಯುವಾಗ ಇದ್ದರು. ಘಟನೆಯಲ್ಲಿ ಆರೋಪಿಗಳು ಹೊಡೆದರು ಎಂದು ನಾನು ಹೇಳಿದ್ದು, ತಕ್ಷಣವೇ ನನಗೆ ಪ್ರಜ್ಞೆ ತಪ್ಪಿತ್ತು ಎಂದರೆ ಸರಿಯಲ್ಲ. ಹೊಡೆದ ಪರಿಣಾಮ ರಕ್ತಗಾಯವಾಗಿದ್ದು, ರಕ್ತ ರವಿಕೆ ಮತ್ತು ಸೀರೆಗೆ ಆಗಿರುತ್ತದೆ. ಸದರಿ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸದರಿ ರವಿಕೆ ಮತ್ತು ಸೀರೆಯನ್ನು ಪೊಲೀಸರಿಗೆ ನೀಡಿರುತ್ತೇನೆ. ಸದರಿ ರವಿಕೆ ಮತ್ತು ಸೀರೆಯನ್ನು ಪೊಲೀಸರು ಮಹಜರ್ ಕ್ರಮಕ್ಕೆ ಬಂದಾಗ ನಾನೇ ನೀಡಿರುತ್ತೇನೆ. ಸದರಿ ಬಗ್ಗೆ ಯಾವುದೇ ದಾಖಲೆಗೆ ರುಜು ಮಾಡಿರುವುದಿಲ್ಲ. ಘಟನಾ ಸಮಯದಲ್ಲಿ ಜ್ಞಾನ

ಹೋಗಿರುತ್ತದೆಂದು ನಾನು ಹೇಳಿದ್ದು ತಿರುಗಿ ಯಾವಾಗ ಜ್ಞಾನ ಬಂತು ಎಂದರೆ ಸಾಕ್ಷಿ ನೀವು ಹೇಳುತ್ತಿರುವುದು ಸುಳ್ಳು ಎಂದು ನುಡಿಯುತ್ತಾರೆ. ನಿಮಗೆ ಯಾವಾಗ ಜ್ಞಾನ ಬಂತು ಎಂದು ಗೊತ್ತಿದಿನೋ ಇಲ್ಲವೋ ಎಂದ ಪ್ರಶ್ನೆಗೆ ನಾನು ಎಚ್ಚರ ತಪ್ಪಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಘಟನೆ ನಡೆಯಿತು ಎಂದು ಹೇಳಲಾದ ಸ್ಥಳದ ಸ.ನಂ.**94/7** ಆರ್.ಟಿ.ಸಿಯನ್ನು ಪೊಲೀಸರಿಗೆ ನೀಡಿದ್ದು ಸದರಿ ಆರ್.ಟಿ.ಸಿ **1** ನೇ ಆರೋಪಿಯ ಹೆಸರಿನಲ್ಲಿರುತ್ತದೆಂದರೆ ಸರಿ. ಚಾಸಾ-**2** ರವರು ನನಗೆ ತುಂಬಾ ಪರಿಚಯಸ್ಥರು ಎಂದರೆ ಸರಿಯಲ್ಲ. ಆರೋಪಿಗಳಿಗೆ ಸೇರಿದ ಆಸ್ತಿಯನ್ನು ಲಪಾಟಯಿಸುವ ಉದ್ದೇಶದಿಂದ ಅವರ ಮೇಲೆ ದ್ವೇಷ ಎಂದರೆ ಸುಳ್ಳು. ಸದರಿ ವಿಚಾರವಾಗಿ ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಡಿ.ಸಿ ಕಛೇರಿಯ ಮುಂದುಗಡೆ ಹೋಗಿ ಆರೋಪಿಗಳ ವಿರುದ್ಧ ಮುಷ್ಟರ ಹೂಡಿದ್ದೇನು ಎಂದರೆ ಸರಿ. ಆರೋಪಿಗಳು ಮು.ಮಾ-**1** ಮತ್ತು **2** ಗಳಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಹುಣಸೂರು ಸಾರ್ಜನಿಕ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.